## ಪ್ರಸಕ್ತ ಸಾಲಿನಲ್ಲಿ ಕೃಷಿ ವಿಜ್ಞಾನ ಕೇಂದ್ರದಿಂದ ಕೈಗೊಳ್ಳಲಾಗುವ ಕಾರ್ಯಕ್ರಮಗಳು

### ಕ್ಷೇತ್ರ ಮರು ಪರಿಶೀಲನೆ

| | | | |
|---|---|---|---|
| 1. | ಶೇಂಗಾ | ಶೇಂಗಾ ತಳಿಗಳ ವಿಶ್ಲೇಷಣೆ | 05 |
| 2. | ಸೋಯಾಅವರೆ | ಸೋಯಾ ಅವರೆ ತಳಿಗಳ ವಿಶ್ಲೇಷಣೆ | 05 |
| 3. | ಗೋವಿನಜೋಳ | ಗೋವಿನಜೋಳದಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ | 02 |
| 4. | ಸೋಯಾಅವರೆ | ಸೋಯಾ ಅವರೆಯಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ | 02 |
| 5. | ಗೋವಿನಜೋಳ | ಗೋವಿನಜೋಳದ ತಳಿಗಳ ವಿಶ್ಲೇಷಣೆ | 05 |
| 6. | ಗೋವಿನ ಜೋಳ | ಗೋವಿನಜೋಳದಲ್ಲಿ ಅಂತರ ಬೆಳೆಯ ಮೂಲಕ ಆದಾಯ ಹೆಚ್ಚಿಸುವಿಕೆ | 03 |
| 7. | ಶೇಂಗಾ | ಶೇಂಗಾ ಬೆಳೆಯಲ್ಲಿ ಸ್ಪೋಡಾಪ್ಟರಾ ಕೀಟದ ನಿರ್ವಹಣೆ | 05 |
| 8. | ಬದನೆ | ಜನರ ಸಹಭಾಗಿತ್ವದ ಮೂಲಕ ಬದನೆ ಬೆಳೆಗಾರರಲ್ಲಿ ದೇಶೀಯ ತಾಂತ್ರಿಕತೆಗಳ ಮಹತ್ವ | 03 |
| 9. | ಈರುಳ್ಳಿ | ಅಗ್ರಿಫೌಂಡ್ ರೆಡ್ ಹಾಗೂ ಅರ್ಕಾ ಕಲ್ಯಾಣ ಈರುಳ್ಳಿ ತಳಿಗಳ ಪರಿಶೀಲನೆ | 02 |
| 10. | ಪಶು ಸಂಗೋಪನೆ | ಹಸುಗಳಲ್ಲಿ ಬಂಜೆತನದ ನಿರ್ವಹಣೆ | 05 |

### ಮುಂಚೂಣಿ ಪ್ರಾತ್ಯಕ್ಷಿಕೆಗಳು

| | | | |
|---|---|---|---|
| 1. | ಸಾವೆ | ಸಾವೆಯ ಸುಕ್ಷೇಮ ತಳಿಯ ಜನಪ್ರೀಯಗೊಳಿಸುವಿಕೆ | 12 |
| 2. | ನವಣೆ | ನವಣೆಯ ಹೆಚ್.ಎಮ್.ಟಿ 100–1 ತಳಿಯ ಜನಪ್ರೀಯಗೊಳಿಸುವಿಕೆ | 12 |
| 3. | ಗೋವಿನ ಜೋಳ | ಗೋವಿನ ಜೋಳದ ಅರ್ಜುನ್ ತಳಿಯ ಪ್ರಾತ್ಯಕ್ಷತೆ | 07 |
| 4. | ಮೆಣಸಿನಕಾಯಿ | ಬ್ಯಾಡಗಿ ಕಡ್ಡಿ ಮೆಣಸಿನಕಾಯಿ ತಳಿಯ ಜನಪ್ರೀಯಗೊಳಿಸುವಿಕೆ | 05 |
| 5. | ನುಗ್ಗೆ | ನುಗ್ಗೆಯ ಭಾಗ್ಯಾ ತಳಿಯ ಜನಪ್ರೀಯಗೊಳಿಸುವಿಕೆ | 05 |
| 6. | ಪಶು ಸಂಗೋಪನೆ | ಪಶು ಆಹಾರದಲ್ಲಿ ಅಝೊಲ್ಲ ಹಾಗೂ ಪೌಷ್ಠೀಕರಿಸಿದ ಒಣ ಮೇವಿನ ಬಳಕೆ | 05 |
| 7. | ಕುರಿ | ಕುರಿಗಳಲ್ಲಿ ಎಕ್ಟೋಪ್ಯಾರಸೈಟ್ ಗಳ ಚಿಕಿತ್ಸೆ | 10 |
| 8. | ಊದಲು | ಊದಲಿನ ಮೌಲ್ಯವರ್ಧನೆ | 05 |
| 9. | ಪರಿಸರ ಸ್ನೇಹಿ ಒಲೆ | ಪರಿಸರ ಸ್ನೇಹಿ ಒಲೆ (ಎನ್ವಿರೋಫಿಟ್ ಚುಲ್ಹಾ)ಯ ಜನಪ್ರೀಯಗೊಳಿಸುವಿಕೆ | 03 |
| 10. | ಅಂಚುಗಳುಳ್ಳ ಕುಡಗೋಲು | ಜೋಳದ ಕೊಯ್ಲಿನಲ್ಲಿ ಅಂಚುಗಳುಳ್ಳ ಕುಡಗೋಲು ಬಳಕೆ | 10 |
| 11. | ಶೇಂಗಾ | ಶೇಂಗಾ ಒಡೆಯುವ ಯಂತ್ರ | 03 |
| 12. | ಶೇಂಗಾ | ಶೇಂಗಾ ಬೆಳೆಯ ಜಿ.ಪಿ.ಬಿ.ಡಿ–4 ತಳಿಯ ಜನಪ್ರೀಯಗೊಳಿಸುವಿಕೆ | 05 |
| 13. | ಸೂರ್ಯಕಾಂತಿ | ಸೂರ್ಯಕಾಂತಿ ಕೆ.ಬಿ.ಎಸ್.ಹೆಚ್–53 (ಮುಂಗಾರು) ತಳಿಯ ಜನಪ್ರೀಯಗೊಳಿಸುವಿಕೆ | 12 |
| 14. | ಸೋಯಾ ಅವರೆ | ಸೋಯಾ ಅವರೆಯ ಜೆ.ಎಸ್.–335 ತಳಿಯ ಜನಪ್ರೀಯಗೊಳಿಸುವಿಕೆ | 12 |
| 15. | ಶೇಂಗಾ | ಶೇಂಗಾ ಬೆಳೆಯ ಡಿ.ಹೆಚ್.–86 ತಳಿಯ ಜನಪ್ರೀಯಗೊಳಿಸುವಿಕೆ | 12 |
| 16. | ಸೂರ್ಯಕಾಂತಿ | ಸೂರ್ಯಕಾಂತಿ ಕೆ.ಬಿ.ಎಸ್.ಹೆಚ್–53 (ಹಿಂಗಾರು) ತಳಿಯ ಜನಪ್ರೀಯಗೊಳಿಸುವಿಕೆ | 12 |
| 17. | ತೊಗರಿ | ತೊಗರಿ ಬೆಳೆಯ ಬಿ.ಎಸ್.ಎಮ್.ಆರ್.–736 ತಳಿಯ ಜನಪ್ರೀಯಗೊಳಿಸುವಿಕೆ | 12 |
| 18. | ಹೆಸರು | ಹೆಸರು ಬೆಳೆಯ ಚೈನಾ ಮೂಂಗ್ ತಳಿಯ ಜನಪ್ರೀಯಗೊಳಿಸುವಿಕೆ | 12 |
| 19. | ಉದ್ದು | ಉದ್ದಿನ ಬೆಳೆಯ ಡಿ.ಯು.–1 ತಳಿಯ ಜನಪ್ರೀಯಗೊಳಿಸುವಿಕೆ | 12 |
| 20. | ಕಡಲೆ | ಕಡಲೆ ಬೆಳೆಯ ಐ.ಸಿ.ಸಿ.ವಿ.–10/ಜೆ.ಜಿ.–11 ತಳಿಯ ಜನಪ್ರೀಯಗೊಳಿಸುವಿಕೆ | 12 |


**ಆಂತರಿಕ ಪ್ರಸಾರಕ್ಕಾಗಿ ಮಾತ್ರ**

ಮುದ್ರಿತ ವಿಷಯ

ಗೆ,

ಪಿನ್ ಕೋಡ್

ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ|| ರಾಣೇಬೆನ್ನೂರು, ಜಿ|| ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)



ಸಂಪಾದಕರು : ಶ್ರೀಮತಿ ಗೀತಾ ಕಳಕನವರ್
ಪ್ರಕಾಶಕರು : ಡಾ. ಎಂ.ವಿ. ನಾಗರಾಜ
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ಸಹ ಸಂಪಾದಕರು :
ಡಾ. ಟಿ.ಎಂ. ಸೌಮ್ಯ, ಡಾ. ಬಿ. ಸಿ. ಹನುಮಂತಸ್ವಾಮಿ, ಡಾ. ಕೆ. ಬಿ. ಯಡಹಳ್ಳಿ, ಡಾ. ಎಸ್. ವೈ. ಮುಕರ್ತಾಳ, ಶ್ರೀ ವಿ.ಡಿ.ರಾಥೋಡ್, ಶ್ರೀ ಎಂ.ಎ. ಗದ್ದನಕೇರಿ, ಶ್ರೀಮತಿ ಸಾಯಿರಾಬಾನು ಎಂ., ಶ್ರೀ ವೆಂಕಟೇಶ ಹೊಸಮನಿ
ವಿನ್ಯಾಸ : ಕು. ರೇಖಾ ಕೆ.ಎನ್., ಅಕ್ಷರ ಜೋಡಣೆ : ಶ್ರೀಮತಿ ಸರೋಜ ತಳವಾರ
ಛಾಯಾಗ್ರಾಹಕರು : ಶ್ರೀ ಮಹೇಶ ಎಲ್. ಎಂ.





ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ವಾರ್ತಾ ಪತ್ರಿಕೆ

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

Website: www. kvkhaveri.org Email:kvk_haveri@rediffmail.com

ಎಪ್ರೀಲ್–ಜೂನ್,2010 ಸಂಪುಟ–10 ಸಂಚಿಕೆ–1




## ಮೆಣಸಿನಕಾಯಿ ಬೆಳೆಯಲ್ಲಿ ರೈತರ ಕ್ಷೇತ್ರ ಪಾಠಶಾಲೆ



ಬ್ಯಾಡಗಿ ತಾಲ್ಲೂಕಿನ ಗುಂಡೇನಹಳ್ಳಿಯಲ್ಲಿ ಮೆಣಸಿನಕಾಯಿ ಬೆಳೆಯಲ್ಲಿ ರೈತರ ಕ್ಷೇತ್ರ ಪಾಠಶಾಲೆ (FFS) ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ ಗ್ರಾಮದ ರೈತರಾದ ಶ್ರೀ ಸತೀಶ ಪಾಟೀಲ್ ರವರ ಒಂದು ಎಕರೆ ಹೊಲವನ್ನು ಆಯ್ಕೆಮಾಡಿ ಅವರಿಗೆ ಬೇಕಾಗುವ ಬೀಜ, ಗೊಬ್ಬರ, ಔಷಧಿ ಹಾಗೂ ಇತರೆ ಸಾಮಗ್ರಿಗಳನ್ನು ಕೃಷಿ ವಿಜ್ಞಾನ ಕೇಂದ್ರದಿಂದ ಒದಗಿಸಿ, ಸಸಿ ಮಡಿಯಿಂದ ಹಿಡಿದು ಕಟಾವಿನ ಹಂತದವರೆಗೂ ಬರುವ ಎಲ್ಲಾ ಹೊಸ ತಾಂತ್ರಿಕತೆಗಳನ್ನು ಅಳವಡಿಸಲಾಗಿದೆ. ಬೀಜೋಪಚಾರ, ಬೇವಿನ ಹಿಂಡಿ, ಎರೆಹುಳುಗೊಬ್ಬರ, ಟ್ರೈಕೋಡರ್ಮಾ ಬಳಕೆ ಹಾಗೂ ಕೀಟಗಳ ಬಾಧೆ ತಡೆಗಟ್ಟಲು ಸಸಿ ಮಡಿಯಲ್ಲಿ ನೈಲಾನ್ ಪರದೆಯನ್ನು ಬಳಸಲಾಗಿದೆ. ಒಂದು ಎಕರೆ ಹೊಲದ ಸುತ್ತಲೂ ಚೆಂಡು ಹೂವು ಹಾಗೂ ಜೋಳವನ್ನು ಆಕರ್ಷಕ/ತಡೆ ಬೆಳೆಯಾಗಿ ಬೆಳೆದು ಕೀಟಗಳನ್ನು ನಿಯಂತ್ರಣದಲ್ಲಿಡಲಾಗಿದೆ. ಪ್ರತೀ ವಾರಕ್ಕೊಮ್ಮೆ ವಿಜ್ಞಾನಿಗಳು ಹೊಲಕ್ಕೆ ಭೇಟಿ ನೀಡಿ ಸೂಕ್ತ ಸಲಹೆಗಳನ್ನು ನೀಡುವುದರ ಜೊತೆಗೆ ಗ್ರಾಮದ ಇತರೆ ರೈತರೂ ಕೂಡ ಈ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವ ಸಲುವಾಗಿ ಎಲ್ಲರನ್ನೂ ಸೇರಿಸಿ ವಿವಿಧ ವಿಷಯಗಳಾದ ಸಾವಯವ ಕೃಷಿ, ಸಮಗ್ರ ಪೋಷಕಾಂಶಗಳ ಬಳಕೆ, ಲಘು ಪೋಷಕಾಂಶಗಳ ಮಹತ್ವ ಹಾಗೂ ಸಮಗ್ರ ಪೀಡೆ ನಿರ್ವಹಣೆ ಕುರಿತು ಗುಂಪು ಚರ್ಚೆ ಹಾಗೂ ತರಬೇತಿ ಕಾರ್ಯಕ್ರಮಗಳ ಮುಖಾಂತರ ಮಾಹಿತಿಯನ್ನು ನೀಡಲಾಗಿದೆ. ಮೆಣಸಿನಕಾಯಿ ಬೆಳೆಯಲ್ಲಿ ನವೀನ ತಾಂತ್ರಿಕತೆಯನ್ನು ಅಳವಡಿಸಿ ಹೆಚ್ಚಿನ ಉತ್ಪನ್ನ ಹಾಗೂ ಆದಾಯವನ್ನು ಪಡೆಯುವುದು ಈ ಯೋಜನೆಯ ಉದ್ದೇಶವಾಗಿದೆ.







## ವೈಜ್ಞಾನಿಕ ಸಲಹಾ ಸಮಿತಿ ಸಭೆ



ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿಯ 32ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯು ದಿನಾಂಕ 11.06.2010 ರಂದು ಡಾ. ಹೆಚ್. ಎಸ್. ವಿಜಯಕುಮಾರ್ ಗೌರವಾನ್ವಿತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ ಧಾರವಾಡ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.ಡಾ. ಆರ್. ಆರ್. ಹಂಚಿನಾಳ, ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ ಧಾರವಾಡ, ಡಾ. ಡಿ.ಪಿ. ಬಿರಾದಾರ್, ಸಹ ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ ಧಾರವಾಡ ಹಾಗೂ ಹಾವೇರಿ ಜಿಲ್ಲೆಯ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು, ರೈತ ಪ್ರತಿನಿಧಿಗಳು ಭಾಗವಹಿಸಿ ಕೇಂದ್ರದ ಕಾರ್ಯಸೂಚಿ ಹಾಗೂ ಅಭಿವೃದ್ಧಿ ಬಗ್ಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.

## ಶೇಂಗಾ ಬೆಳೆಯ ಕ್ಷೇತ್ರೋತ್ಸವ





ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ವತಿಯಿಂದ ದಿನಾಂಕ 21.04.2010 ರಂದು ಹಾವೇರಿ ತಾಲ್ಲೂಕು ಅಗಡಿ ಗ್ರಾಮದಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಯಲ್ಲಿ ಕೈಗೊಂಡ ಜಿ.ಪಿ.ಬಿ.ಡಿ. 4 ಶೇಂಗಾ ತಳಿಯ ಕ್ಷೇತ್ರೋತ್ಸವವನ್ನು ಶ್ರೀ ಬಸೇಗಣ್ಣಿಯವರ ತಾಕಿನಲ್ಲಿ ಏರ್ಪಡಿಸಲಾಗಿತ್ತು.

ಧಾರವಾಡ ಕೃಷಿ ವಿಶ್ವವಿದ್ಯಾಲಯದಿಂದ ಬಿಡುಗಡೆ ಮಾಡಿರುವ ಶೇಂಗಾ ತಳಿ ಜಿ.ಪಿ.ಬಿ.ಡಿ.–4 ಶೇಂಗಾ ಬೆಳೆಗೆ ಮಾರಕವಾಗಿರುವ ಎಲೆಚುಕ್ಕೆ ರೋಗದ ನಿರೋಧಕತೆ ಹೊಂದಿದ್ದು ಈ ರೋಗದಿಂದ ಉಂಟಾಗುವ ಹಾನಿಯನ್ನು ತಪ್ಪಿಸುವುದರ ಜೊತೆಗೆ ಈ ತಳಿಯು ಇತರೆ ತಳಿಗಳಷ್ಟೇ ಎಣ್ಣೆಯ ಅಂಶವನ್ನು ಹೊಂದಿದೆ. ಮುಂಗಾರು ಹಾಗೂ ಬೇಸಿಗೆಯಲ್ಲಿ ಅನುಕ್ರಮವಾಗಿ ಮಳೆಯಾಶ್ರಿತ ಹಾಗೂ ನೀರಾವರಿ ಪ್ರದೇಶದಲ್ಲಿ ಬೆಳೆದಾಗ 105 ರಿಂದ 110 ದಿವಸಗಳಲ್ಲಿ ಕಟಾವಿಗೆ ಬರಲಿದ್ದು ಪ್ರತಿ ಹೆಕ್ಟೇರಿಗೆ 25 ರಿಂದ 30 ಕ್ವಿಂಟಲ್ ಶೇಂಗಾ ಇಳುವರಿ ನೀಡುವುದರೊಂದಿಗೆ ಉತ್ತಮ ಗುಣಮಟ್ಟದ ಮೇವು ಸಹ ದೊರೆಯುತ್ತದೆ. ಆದ್ದರಿಂದ ರೈತರು ಇದರ ಲಾಭ ಪಡೆಯಬೇಕೆಂದು ಕೃಷಿ ವಿಜ್ಞಾನ ಕೇಂದ್ರ ತಿಳಿಸಬಯಸುತ್ತದೆ.

## ಜಾನುವಾರು ಸಾಕಾಣಿಕೆ ತರಬೇತಿ ಕಾರ್ಯಕ್ರಮ




ಕೃಷಿ ವಿಜ್ಞಾನ ಕೇಂದ್ರ ಮತ್ತು ಜಿಲ್ಲಾ ಜಲಾನಯನ ಯೋಜನೆ, ಹಾವೇರಿ ಇವರ ಸಂಯುಕ್ತ ಆಶ್ರಯದಲ್ಲಿ ರಾಣೇಬೆನ್ನೂರು ತಾಲ್ಲೂಕಿನ ಬೆನಕನಕೊಂಡ ಮತ್ತು ಕಮದೋಡ ಗ್ರಾಮದ ರೈತರಿಗೆ 2 ದಿನಗಳ ಸುಧಾರಿತ ಸಮಗ್ರ ಜಾನುವಾರು ಸಾಕಾಣಿಕೆ ತರಬೇತಿ ಕಾರ್ಯಕ್ರಮವನ್ನು ಆವರಣದಲ್ಲಿ ದಿ : 21.06.2010 ರಿಂದ 23.06.2010 ರವರೆಗೆ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಶಿಭಿರಾರ್ಥಿಗಳಿಗೆ ತಳಿಗಳು ಕೃತಕ ಗರ್ಭಧಾರಣೆ, ಮೇವಿನ ಬೆಳೆಗಳು, ನಿರ್ವಹಣೆ, ಪಶುಪೋಷಣೆ ಕುರಿತು ಮಾಹಿತಿಗಳನ್ನು ನೀಡಲಾಯಿತು. ಕ್ಷೇತ್ರ ಭೇಟಿಯ ಮೂಲಕ ಪ್ರಾಯೋಗಿಕ ಮಾಹಿತಿಯನ್ನೂ ಸಹ ಡಾ.ಮುಕರ್ತಾಳ ರವರು ತಿಳಿಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಎಂ. ವಿ. ನಾಗರಾಜರವರು ವಹಿಸಿದ್ದರು.

## ಹಿತ ನುಡಿ

| | |
|---|---|
| ಎತ್ತೊಮ್ಮೆ ಹೂಡುವುದು ಉತ್ತೊಮ್ಮೆ ಹರಗುವುದು<br>ಬಿತ್ತೊಮ್ಮೆ ಹರಗಿ ಕಳೆತೆಗೆದರಾ ಬೆಳೆಯು<br>ಎತ್ತುಗೈಯುದ್ದ ಸರ್ವಜ್ಞ॥ | ವಾಯು ವಾಯುವ್ಯ ಕೂಡೆ । ವಹಿಲದಿಂ । ಮಳೆಯಕ್ಕು<br>ವಾಯು ನೈಋತ್ಯನೊಡಗೂಡೆ ಮಳೆ ತಾನು।<br>ವಾಯುವೆ ಅಕ್ಕು ಸರ್ವಜ್ಞ॥ |



## ಜಾನುವಾರು ವಿಮೆ ಕುರಿತ ತರಬೇತಿ ಕಾರ್ಯಕ್ರಮ




ಕೃಷಿ ವಿಜ್ಞಾನ ಕೇಂದ್ರ ಮತ್ತು ಪಶುಸಂಗೋಪನೆ ಹಾಗೂ ಪಶು ವೈದ್ಯ ಇಲಾಖೆ ಹಾವೇರಿ ಇವರ ಜಂಟಿ ಆಶ್ರಯದಲ್ಲಿ ಜಿಲ್ಲೆಯ ಪಶು ವೈದ್ಯಾಧಿಕಾರಿಗಳಿಗೆ ದಿನಾಂಕ 23.04.2010 ರಂದು ಜಾನುವಾರು ವಿಮೆ ಬಗೆಗಿನ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಜಾನುವಾರು ವಿಮೆ ಕುರಿತ ಮಾಹಿತಿ, ಪದ್ದತಿಗಳು ಹಾಗೂ ವಿಮೆ ಕಂಪನಿಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಅಪರ ನಿರ್ದೇಶಕರಾದ ಡಾ. ದಾಸ್‌ರವರು ತಿಳಿಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಎಂ.ವಿ. ನಾಗರಾಜರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಇಲಾಖೆಯ ಉಪ ನಿರ್ದೇಶಕರಾದ ಡಾ. ಟಿ. ಶಿವರಾಮ ಭಟ್ ರವರು ಸಹ ಹಾಜರಿದ್ದು ತರಬೇತಿಯ ಸದುಪಯೋಗ ಪಡೆಯಲು ಕೋರಿದರು.

## ತರಬೇತಿ ಕಾರ್ಯಕ್ರಮಗಳು

### ಒಳ ಆವರಣ ತರಬೇತಿಗಳು



ಮಣ್ಣು ಮತ್ತು ಬೀಜದಿಂದ ಬರುವ ಸಸ್ಯರೋಗಗಳ ನಿರ್ವಹಣೆ



ಸಾವಯವ ಕೃಷಿಯಲ್ಲಿ ಸಸ್ಯರೋಗಗಳ ನಿರ್ವಹಣೆ



ಕಿರುಧಾನ್ಯಗಳ ಬೇಸಾಯ ಕ್ರಮಗಳು

### ಹೊರ ಆವರಣ ತರಬೇತಿಗಳು





## ಸಮಗ್ರ ಕೃಷಿ ಪದ್ಧತಿ






ಸಮಗ್ರ ಕೃಷಿ ಪದ್ದತಿ ಯೋಜನೆಯ ಅಡಿಯಲ್ಲಿ ಚನ್ನಾಪುರ ತಾಂಡಾ ಹಾಗು ಅರಬಗೊಂಡ ಗ್ರಾಮಗಳ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಆಯ್ದ ಫಲಾನುಭವಿಗಳಿಗೆ ಬಿತ್ತನೆ ಬೀಜ ಮತ್ತು ತೋಟಗಾರಿಕೆ ಸಸಿಗಳ ವಿತರಣೆ.